# ಕರುಣೆ-ಕ್ರೌರ್ಯ

ಮನುಷ್ಯನಲ್ಲಿನ ಕ್ರೌರ್ಯ, ಹಿಂಸಾರತಿ, ದ್ವೇಷ– ಮುಂತಾದ ಹೀನ ಪ್ರವೃತ್ತಿಗಳನ್ನು ಮತ್ತೆ ಮತ್ತೆ ನೆನಪಿಸುವ ದಿನಗಳಲ್ಲಿ 'ಗುಡ್ ಫ್ರೈಡೇ'ಯೂ ಒಂದು. ಮನುಕುಲದ ಒಳಿತಿಗಾಗಿ ತನ್ನ ಬದುಕನ್ನೇ ಸಮರ್ಪಿಸಿಕೊಂಡ ಮಹಾತ್ಮ ಯೇಸುವನ್ನು ಶಿಲುಬೆಗೇರಿಸಿದ ಶುಕ್ರವಾರವನ್ನು ಕ್ರಿಶ್ಚಿಯನ್ ಬಾಂಧವರು 'ಗುಡ್ ಫ್ರೈಡೇ' ಎಂದು ಕರೆದು, ಆ ದಿನ ಚರ್ಚುಗಳಲ್ಲಿ ವಿಶೇಷ ಪ್ರಾರ್ಥನೆ ಸಲ್ಲಿಸುತ್ತಾರೆ; ಜಗತ್ತಿನ ಹಿತಕ್ಕಾಗಿ ಆತ್ಮಬಲಿದಾನ ನೀಡಿದ ಲೋಕಗುರು ಯೇಸುವನ್ನು ಸ್ಮರಿಸಿಕೊಳ್ಳುತ್ತಾರೆ.

ಜೋಸೆಫ್ ಮತ್ತು ಮೇರಿ ದಂಪತಿಯ ಮಗನಾಗಿ ಕುರಿಯ ರೊಪ್ಪದಲ್ಲಿ ಜನಿಸಿದ್ದ ಯೇಸು ದಾರಿದ್ರ್ಯ, ಅಜ್ಞಾನ, ಮೇಲು, ಕೀಳು ಇತ್ಯಾದಿ ಮಾನವ ಲೋಕದ ವಿಕಾರಗಳೆಲ್ಲವನ್ನು ಕಾಣುತ್ತಲೇ ಬೆಳೆದ; ತನ್ನ ಮೂವತ್ತಾರನೇ ವಯಸ್ಸಿನಲ್ಲಿ ಧರ್ಮದೀಕ್ಷೆಯನ್ನು ಪಡೆದು, ಜನಸಾಮಾನ್ಯರಲ್ಲಿ ವಿವೇಕದ ಬೆಳಕನ್ನು ಮೂಡಿಸಲು ಪ್ರಯತ್ನಿಸಿದ; ಅವರ ಕಣ್ಣೀರನ್ನು ತೊಡೆಯಲು ತನ್ನ ಶಕ್ತಿಯನ್ನೆಲ್ಲ ವಿನಿಯೋಗಿಸಿದ; ಧರ್ಮದ ಹೆಸರಲ್ಲಿ ಜನರಲ್ಲಿ ಅಜ್ಞಾನವನ್ನು ಬಿತ್ತಿ, ಶೋಷಣೆ ಮಾಡುತ್ತಿದ್ದ ಆಷಾಢಭೂತಿಗಳನ್ನು ಖಂಡಿಸಿದ. ಇದರಿಂದಾಗಿ ದೀನದಲಿತರ ಪಾಲಿಗೆ 'ದೇವ ಪುತ್ರ'ನಾಗಿದ್ದ ಆತ ಪಟ್ಟಭದ್ರರ ಪಾಲಿಗೆ ಶತ್ರುವಾದ. ಮಾನವ ಧರ್ಮವನ್ನು ಪಸರಿಸುತ್ತಾ, ದಿನದಿಂದ ದಿನಕ್ಕೆ ತನ್ನ ಪ್ರಭಾವವನ್ನು ವಿಸ್ತರಿಸಿಕೊಳ್ಳುತ್ತಿದ್ದ ಯೇಸುವನ್ನು ಸಹಿಸಿಕೊಳ್ಳುವುದು ಯಹೂದ್ಯ ಧರ್ಮದ ಮುಖಂಡರಿಗೆ ಅಸಾಧ್ಯವೆನ್ನಿಸಿದುದರಲ್ಲಿ ಆಶ್ಚರ್ಯವಿಲ್ಲ. ಪರಿಣಾಮವಾಗಿ, ಆತನ ಮೇಲೆ ಧರ್ಮದ್ರೋಹದ ಆಪಾದನೆ ಹೊರಿಸಿ, ವಿಚಾರಣೆ ಮಾಡುವ ನಾಟಕ ನಡೆಸಿ, ಮರಣದಂಡನೆಯ ಶಿಕ್ಷೆ ವಿಧಿಸಲಾಯಿತು. ಆತನ ತಲೆಯ ಮೇಲೆ ಮುಳ್ಳಿನ ಕಿರೀಟ ಇರಿಸಿದರು; ಆತನ ಶಿಲುಬೆಯನ್ನು ಅವನಿಂದಲೇ ಹೊರಿಸಿಕೊಂಡು 'ಗೊಲ್ಗೊಥಾ' ಎಂಬಲ್ಲಿಗೆ ಕರೆತಂದರು; ಕೆಟ್ಟ ಕೆಟ್ಟ ಮಾತುಗಳಲ್ಲಿ ಛೇಡಿಸುತ್ತಾ, ಚಾವಟಿಯಿಂದ ಹೊಡೆಯುತ್ತಾ, ಇಬ್ಬರು ಕಳ್ಳರ ನಡುವೆ ಅವನನ್ನು ಮೊಳೆ ಹೊಡೆದು ಶಿಲುಬೆಗೇರಿಸಿದರು. ಇಂಥ ಯಾತನೆಯ ನಡುವೆಯೂ ಯೇಸು ಪ್ರಭು ತನ್ನ ಮರಣಕ್ಕೆ ಕಾರಣರಾದವರನ್ನು ಕ್ಷಮಿಸುವಂತೆ ದೇವರನ್ನು ಪ್ರಾರ್ಥಿಸುತ್ತಾ ಕಣ್ಮುಚ್ಚಿದ.

ಯೇಸು ಈ ಜಗತ್ತು ಕಂಡ ಮಹಾಮಾನವತಾವಾದಿಗಳಲ್ಲಿ ಮೊದಲ ಸಾಲಿಗೆ ಸೇರಿದವನೆಂದರೆ ತಪ್ಪಲ್ಲ. ಆತ ಬೋಧಿಸಿದ್ದು ಜಾತಿ ಮತ ಆಚರಣೆಗಳ ಸೀಮಿತ ಪರಿಧಿಯಿಂದ ಸಂಕುಚಿತಗೊಳ್ಳದ ಶುದ್ಧ ಮಾನವಧರ್ಮ. ಇಹದ ಬದುಕು ಕರುಣೆ ಪ್ರೀತಿಗಳಿಂದ ಕೂಡಿ, ಸುಂದರವಾಗಿರಬೇಕೆಂಬುದರ ಕಡೆಗೇ ಆತ ಗಮನ ನೀಡಿದ. ಕ್ಲಿಷ್ಟವಲ್ಲದ ಸರಳ ಭಾಷೆಯಲ್ಲಿ– ಬಹಳಷ್ಟು ಬಾರಿ ಚಿಕ್ಕ ಹಾಗೂ ಚೊಕ್ಕ ದೃಷ್ಟಾಂತ ಕಥೆಗಳ ಮೂಲಕ– ಜನ ಸಾಮಾನ್ಯರ ಮನಸ್ಸಿಗೆ ನಾಟುವಂತೆ ಆತ ಬೋಧನೆ ಮಾಡಿದ. ಎಲ್ಲರ ಹೃದಯಗಳಲ್ಲೂ ಭಗವಂತನ ರಾಜ್ಯವಿದೆ; ದೇವರನ್ನು ಕಾಣಲು ಶುದ್ಧ ಮನಸ್ಸೊಂದೇ ಸಾಕು; ಸಹ ಜೀವಿಗಳ ದುಃಖದಲ್ಲಿ ಪಾಲ್ಗೊಳ್ಳುತ್ತಾ, ಕಷ್ಟದಲ್ಲಿರುವವರಿಗೆ ಕರುಣೆ ತೋರಿ ಸಂತೈಸುತ್ತಾ, ಕಲಹ ಮನಸ್ತಾಪಗಳನ್ನು ದೂರವಿರಿಸಿ, ಶಾಂತಿಗಾಗಿ ತುಡಿಯುತ್ತಾ ಇರುವವರಿಗೆ ಭಗವಂತನ ಆಶೀರ್ವಾದ ಸದಾ ಇರುತ್ತದೆ ಎಂಬುದನ್ನು ಪದೇ ಪದೇ ಹೇಳಿದ. ತನ್ನ ಬೋಧನೆಯನ್ನು ಸ್ವಂತ ಬದುಕಿನಲ್ಲಿ ಅನುಷ್ಠಾನಕ್ಕೆ ತಂದು ಅದನ್ನು ಎಲ್ಲರೂ ಸಾಕ್ಷಾತ್ಕರಿಸಿಕೊಳ್ಳಲು ಸಾಧ್ಯ ಎಂದು ತೋರಿಸಿಕೊಟ್ಟ. ಈ ಭೂಮಿಯ ಮೇಲೆ ತಪ್ಪು ಮಾಡದವರು ಯಾರೂ ಇಲ್ಲ, ಹೀಗಾಗಿ ಇತರರನ್ನು ತಪ್ಪಿತಸ್ಥರೆಂದು ತೀರ್ಮಾನಿಸಿ, ಶಿಕ್ಷಿಸುವ ಅಧಿಕಾರ ಯಾರಿಗೂ ಇಲ್ಲವೆಂಬ ಸತ್ಯವನ್ನು ಮಗ್ದಲದ ಮೇರಿಯ ಪ್ರಕರಣದಲ್ಲಿ ಸಾಬೀತುಗೊಳಿಸಿದ. ನಿಮ್ಮ ನೆರೆಯವರನ್ನು ಪ್ರೀತಿಸಿದಂತೆಯೇ ನಿಮ್ಮ ವೈರಿಗಳನ್ನೂ ಪ್ರೀತಿಸಿ... ಕೊಲ್ಲಬೇಡಿ; ಕಳ್ಳತನ, ಹಾದರ ಕೂಡದು... ಕಣ್ಣಿಗೆ ಕಣ್ಣು, ಹಲ್ಲಿಗೆ ಹಲ್ಲು ಎಂಬ ಪ್ರತೀಕಾರ ಭಾವ ಸರಿಯಲ್ಲ; ನಿಮ್ಮ ಒಂದು ಕೆನ್ನೆಗೆ ಹೊಡೆದವನಿಗೆ ಇನ್ನೊಂದನ್ನು ಒಡ್ಡಿ... ದೇವರು ನಿಮಗೆ ಒಲಿಯುವುದು ನಿಮ್ಮಲ್ಲಿ ಇತರರ ಬಗೆಗೆ ಇರುವ ಕರುಣೆಯಿಂದ, ನೀವು ಮಾಡುವ ಆಡಂಬರದ ಪೂಜೆಯಿಂದಲ್ಲ... ಯೇಸುವಿನ ಇಂಥ ಮಾತುಗಳಲ್ಲಿ ನಾವು ಕಾಣುವುದು ಪರಿಶುದ್ಧ ಜೀವನ ಧರ್ಮ ಸೂತ್ರಗಳನ್ನೇ. ಗಾಂಧೀಜಿಯವರ ಸತ್ಯಾಗ್ರಹ ತತ್ವದ ಹಿನ್ನೆಲೆಯಲ್ಲಿ ಯೇಸುವಿನ ಬೋಧನೆಯ ಸ್ಪಷ್ಟ ಪ್ರಭಾವವನ್ನು ಗುರುತಿಸಬಹುದು.

ಬದುಕಿನುದ್ದಕ್ಕೂ ಕರುಣೆಯನ್ನೇ ಉಸಿರಾಗಿಸಿಕೊಂಡಿದ್ದ ಯೇಸು ಕ್ರೌರ್ಯಕ್ಕೆ ತುತ್ತಾದುದು ಇತಿಹಾಸದ ದುರಂತಗಳಲ್ಲಿ ಒಂದು. ಸಾಕ್ರೆಟೀಸ್, ಬಸವಣ್ಣ, ಗಾಂಧೀಜಿ– ಹೀಗೆ ಅನೇಕ ಮಹನೀಯರ ಬದುಕಿನಲ್ಲೂ ಹೀಗೇ ನಡೆದಿದೆ. ಕರುಣೆ ಕ್ರೌರ್ಯಗಳ ಸಂಘರ್ಷ ಮಾನವ ಇತಿಹಾಸದಲ್ಲಿ ನಿರಂತರವಾಗಿ ನಡೆಯುತ್ತಲೇ ಇದೆ. ಮಾನವನ ಬದುಕಿನ ದಾರಿ ಏರಿಳಿತಗಳಿಂದ ಕೂಡಿರುವಂಥದು; ಪತನ ಅಭ್ಯುದಯಗಳ ಪಥ ಅದು. ಅಭ್ಯುದಯದ ಹಂತದಲ್ಲಿ ಯೇಸುವಿನಂಥ ಮಹಾತ್ಮರು ಕಾಣಿಸಿಕೊಳ್ಳುತ್ತಾರೆ; ಪತನದ ಹಂತದಲ್ಲಿ ಅಂಥವರು ಮರೆಯಾಗಿ, ತಮಸ್ಸು ತಾಂಡವವಾಡುತ್ತದೆ!

■ ವೈನತೇಯ

## ಮಾತೇ ಮುತ್ತು

★ ಆತ್ಮಹತ್ಯೆಯಲ್ಲಿ ಬಹಳ ದೋಷಗಳುಂಟು. ಬದುಕಿದ್ದರೆ ಒಳ್ಳೆಯದನ್ನು ಕಾಣಬಹುದು. ಆದ್ದರಿಂದ ಆತ್ಮಹತ್ಯೆ ಮಾಡಿಕೊಳ್ಳದೆ ಬದುಕಿರಬೇಕು.

–ರಾಮಾಯಣ

★ ನಾಳೆ ಮಾಡಬೇಕಾದ ಕೆಲಸವನ್ನು ಈ ದಿನವೇ ಮಾಡಬೇಕು. ಅಪರಾಹ್ನದಲ್ಲಿ ಮಾಡಬೇಕಾ ದದ್ದನ್ನು ಪೂರ್ವಾಹ್ನದಲ್ಲಿ ಮಾಡಬೇಕು. ಏಕೆಂದರೆ ಈತನು ಕೆಲಸ ಮಾಡಿದನೇ ಇಲ್ಲವೇ ಎಂದು ಮೃತ್ಯುವು ಕಾಯುವುದಿಲ್ಲ.

–ಮಹಾಭಾರತ

★ ತಪ್ಪುಗಳನ್ನು ತಪ್ಪು ಎಂದು ತಿಳಿದುಕೊಳ್ಳದಿರುವುದೇ ದೊಡ್ಡ ತಪ್ಪು.

–ಥಾಮಸ್ ಕಾರ್ಲೈಲ್

★ ನಮಗೆ ತಿಳಿವಳಿಕೆ ಕಡಿಮೆಯಿದ್ದರೂ ಆತ್ಮವಿಶ್ವಾಸದಿಂದ ಕೆಲಸ ಮಾಡಿದರೆ ಅಸಾಧ್ಯವಾದುದನ್ನು ಸಾಧಿಸಬಹುದು.

–ಬರೋಸ್

★ ಯಾವುದನ್ನು ನೀನು ಮಾಡಲು ಸಾಧ್ಯವಿಲ್ಲ ಎನ್ನುವರೋ, ಅದನ್ನು ಮಾಡಿ ತೋರಿಸುವುದೇ ಜಗತ್ತಿನಲ್ಲಿ ನೀನು ಮಾಡಬಹುದಾದ ದೊಡ್ಡ ಕಾರ್ಯ.

–ವಾಲ್ಟೇರ್

★ ಸುಮ್ಮನೆ ಕುಳಿತುಕೊಳ್ಳುವುದರಿಂದ ಸಂತೋಷ ಅನುಭವಕ್ಕೆ ಬರುವುದಿಲ್ಲ. ಸದಾಕಾಲ ಒಂದಿಲ್ಲೊಂದು ಕೆಲಸದಲ್ಲಿ ತೊಡಗಿರುವಾಗ ಮಾತ್ರ ಸಂತೋಷದ ಕೋಡು ನಿಗುರಿ ನಿಂತಿರುತ್ತದೆ.

–ಎನ್. ಹಿಲ್

★ ಶುದ್ಧ ನಿಷ್ಪ್ರಯೋಜಕ ಎಂದೆನಿಸಿಕೊಳ್ಳುವವನು ಯಾರೊಬ್ಬನೂ ಇರಲಾರ. ಸಮಯ ಒದಗಿ ಬಂದಾಗ ಪ್ರತಿಯೊಬ್ಬನೂ ಒಂದಿಲ್ಲೊಂದು ರೀತಿಯಲ್ಲಿ ಉಪಯುಕ್ತವೆಂದು ಕಂಡುಬರುತ್ತಾನೆ.

–ಹೆನ್ರಿ ಫೋರ್ಡ್

★ ನಿಮ್ಮ ಅಭಿಪ್ರಾಯವೇನು ಎಂದು ಕೇಳದಿರುವ ಸಂದರ್ಭದಲ್ಲಿ ನೀವಾಗಿಯೇ ಮುಂದೆ ಹೋಗಿ ಅದನ್ನು ತಿಳಿಸಬಾರದು.

–ಮೊರಾರ್ಜಿ ದೇಸಾಯಿ

★ ಇನ್ನೊಬ್ಬರಲ್ಲಿ ನಮ್ಮನ್ನು ಕಾಣುವುದು; ಹಾಗೆ ಕಾಣುವುದರಿಂದ ಆಗುವ ಸಂತೋಷ– ಅದೇ ಪ್ರೇಮ.

–ಅಲೆಕ್ಸಾಂಡರ್ ಸ್ಮಿತ್

★ ಪ್ರೇಮ– ಎಂಥ ಸ್ವರ್ಗ! ಓ– ಎಂಥ ನರಕ!

–ಥಾಮಸ್ ಡೆಕ್ಕರ್

★ ಪ್ರೇಮ ಎನ್ನುವುದು 'ದೆವ್ವ'ದಂತೆ! ಎಲ್ಲರೂ ಅದರ ಬಗ್ಗೆ ಮಾತನಾಡುತ್ತಾರೆ, ಯಾರೂ ಅದನ್ನು ಕಾಣರು!

–ಲಾ ರೋಚೆ ಫಕಾಲ್ಡ್

★ ವಿವೇಕಿಯಾಗಿರುವುದು ಹಾಗೂ ಪ್ರೇಮಿಸುವುದು– ದೇವರುಗಳಿಗೆ ಮಾತ್ರ ಸಾಧ್ಯ; ಮನುಷ್ಯ ಮಾತ್ರನಿಂದಾಗದು.

–ವಿಲಿಯಂ ಶೇಕ್ಸ್‌ಪಿಯರ್